5) ಮುಧೋಳ	

3713(3845); ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ); ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ನಗರ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳು, ವಿದ್ಯಾರ್ಥಿಗಳು ಪೋಷಕರಿಲ್ಲದೆ ಅನಾಥವಾಗಿರುವ ಅಂಶ ಬೆಳಕಿಗೆ ಬಂದಿದೆಯೇ;

ಆ) ಈ ಪ್ರಕರಣಗಳು ಯಾವ ಜಿಲ್ಲೆಯ ನಗರ ಪ್ರದೇಶದಲ್ಲಿ ಕಂಡು ಬಂದಿದೆ, ಇದಕ್ಕೆ ಕಾರಣಗಳೇನು;

ಇ) ಇದಕ್ಕೆ ಆಡಳಿತಾತ್ಮಕ ಲೋಪ ಅಥವಾ ಮೂಲಭೂತ ಸೌಲಭ್ಯದ ಕೊರತೆ ಇದೆಯೇ;

ಈ) ಶಿಕ್ಷಣ ಇಲಾಖೆಯ ಆಡಳಿತಾತ್ಮಕ ದೃಷ್ಟಿಯಿಂದ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿದ್ದರೂ ಸಹ ನಗರ ಪ್ರದೇಶಗಳ ಪುರಸಭೆ, ನಗರಸಭೆ, ನಗರಪಾಲಿಕೆಗಳು ಈ ಶಾಲೆಗಳ ಬಗ್ಗೆ ಗಮನಹರಿಸಲು ಕಾರಣಗಳೇನು;

ಉ) ಈ ತಾರತಮ್ಯ ನಿವಾರಿಸಲು ಸರ್ಕಾರದ ಕ್ರಮಗಳೇನು (ಪೂರ್ವ ವಿವರ ನೀಡುವುದು)?

ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ)

- ಹೌದು, ಕೆಲವು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆ.
- ಆದರೆ ಅನಾಥವಾಗಿರುವ ಶಾಲೆಗಳು ಇರುವುದಿಲ್ಲ.
- ಎಲ್ಲ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಉತ್ತರ ಗುಣಮಟ್ಟದ ಕಡೆಗೆ ಪರಿವರ್ತಿಸಲಾಗುತ್ತಿದೆ.

ಆ)

- ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಮತ್ತು ಮಂಗಳೂರು ಮುಂತಾದ ಜಿಲ್ಲಾ ಕೇಂದ್ರಗಳು.
- ಹತ್ತಿರದಲ್ಲಿ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳು ಪ್ರಾರಂಭವಾಗಿರುವುದು.

- ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮಕ್ಕೆ ಅವಕಾಶ ಇಲ್ಲದಿರುವುದು.
- ಕೆಲವು ಸರ್ಕಾರಿ ಶಾಲೆಗಳಲ್ಲಿ ಮಾತ್ರ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುತ್ತದೆ.

ಇ)

- ಆಡಳಿತಾತ್ಮಕ ಲೋಪ ಅಥವಾ ಮೂಲಭೂತ ಸೌಲಭ್ಯದ ಕೊರತೆ ಕೆಲವೆಡೆ ಇರಬಹುದಾದರೂ ಸರ್ವ ಶಿಕ್ಷಣ ಅಭಿಯಾನದಡಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ (ಎಸ್.ಡಿ.ಎಂ.ಸಿ.) ಮೂಲಕ ಉತ್ತಮಗೊಳಿಸಲಾಗುತ್ತಿದೆ.
- ಪ್ರಸ್ತುತ ಎಲ್ಲ ಪ್ರಾಥಮಿಕ ಶಾಲೆಗಳ ಸ್ಥಿತಿ ಸಾಕಷ್ಟು ಉತ್ತಮಗೊಂಡಿರುತ್ತದೆ.

ಈ)

- ಇದು ನಿಜಾಂಶವಾಗಿದೆ. ಸಾಮಾನ್ಯವಾಗಿ ನಗರ ಪ್ರದೇಶದ ಜನರು ಜಿಲ್ಲಾ ಪಂಚಾಯತ್ ಮಾಡುವುದಿಲ್ಲವಾದ್ದರಿಂದ ಇಂಥಹ ಪರಿಸ್ಥಿತಿ ಉಂಟಾಗಿದೆ.
- ಅದಾಗ್ಯೂ ಇದನ್ನು ಪರಿಹರಿಸಲು ನಗರ ಪ್ರದೇಶದ ಶಾಲೆಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಹಣವನ್ನು ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಲಾಗುತ್ತಿದೆ. ಈ ಸಾಲಿನಲ್ಲಿ ರೂ.98.25 ಲಕ್ಷ ಅನುದಾನವನ್ನು ಒದಗಿಸಲಾಗಿದೆ.

ಉ)

- ಮೇಲೆ ತಿಳಿಸಿದ ಕ್ರಮವಲ್ಲದೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಪ್ರಾಥಮಿಕ ಶಾಲೆಗಳಿಗೆ ನೀರು, ಶೌಚಾಲಯ ಸೇರಿದಂತೆ ಕಟ್ಟಡ, ಹೆಚ್ಚುವರಿ ಕೊಠಡಿಗಳ ಅನುದಾನವನ್ನು ನಗರ ಪ್ರದೇಶಗಳಿಗೆ ಅಲ್ಲಿನ ಸರ್ಕಾರಿ ಶಾಲೆಗಳ ಮಕ್ಕಳ ಸಂಖ್ಯೆಗನುಗುಣವಾಗಿ ಪ್ರತ್ಯೇಕವಾಗಿ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಪೀಠೋಪಕರಣ ಹಾಗೂ ಪಿಠೋಪಕರಣಗಳು, ಹೆಚ್ಚುವರಿ ಶಿಕ್ಷಕರು, ಶಿಕ್ಷಕರಿಗೆ ವಿಶೇಷ ಅನುದಾನ, ಶಿಕ್ಷಕರಿಗೆ ಪ್ರತಿ ವರ್ಷ 20 ದಿನಗಳಷ್ಟು ತರಬೇತಿ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ

ಒದಗಿಸಲಾಗುತ್ತಿದೆ. ಶಿಕ್ಷಕರಿಗೆ ವಿಶೇಷ ಅನುದಾನವನ್ನು ಖಾಸಗಿ ಅನುದಾನಿತ ಶಾಲೆಗಳಿಗೂ ಒದಗಿಸಲಾಗುತ್ತಿದೆ.

- ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ ಅಕ್ಷರ ದಾಸೋಹದಡಿಯಲ್ಲಿ ಮಧ್ಯಾಹ್ನ ಬಿಸಿಯೂಟ, ಹೆಣ್ಣು ಮಕ್ಕಳಿಗೆ ಶುಲ್ಕ ವಿನಾಯ್ತಿ ಮುಂತಾದ ಅನೇಕ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ಜಾರಿಯಲ್ಲಿವೆ.

3714(4052); ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ);
ಮಾನ್ಯ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಸ್ವಚ್ಛ ಗ್ರಾಮ ಯೋಜನೆಯ ಕಾರ್ಯಕ್ರಮ ಯಾವಾಗಿನಿಂದ ಜಾರಿಗೆ ಬಂದಿದೆ;

ಆ) ಈ ಕಾರ್ಯಕ್ರಮದಲ್ಲಿ ರಾಜ್ಯದ ಪಾಲು ಸಮುದಾಯ ವಂತಿಗೆ ಹಾಗೂ ಸಾಲ ಎಷ್ಟು;

ಇ) ಈ ಕಾರ್ಯಕ್ರಮದಡಿಯಲ್ಲಿ ಆಯ್ಕೆಯಾದ ಗ್ರಾಮಗಳೆಷ್ಟು; ಇದರಡಿ ಬರುವ ಮನೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಈ) ಇದು ಎಷ್ಟು ಹಂತದಲ್ಲಿ ಜಾರಿಗೆ ಬರಲಿದೆ ಇದುವರೆಗಿನ ತರಗತಿಯ ವಿವರಗಳನ್ನು ವರ್ಷವಾರು 31.3.2005 ರವರೆಗಿನ ಮಾಹಿತಿ ನೀಡುವುದು?

ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಮೊದಲನೇ ಹಂತದ ಸ್ವಚ್ಛ ಗ್ರಾಮ ಯೋಜನೆಯು 2000–01ರಿಂದ ಹಾಗೂ 2ನೇ ಹಂತದ ಯೋಜನೆಯು 2003–04ನೇ ಸಾಲಿನಿಂದ ಜಾರಿಯಲ್ಲಿದೆ.

ಆ) ಮೊದಲನೇ ಹಂತದ ಈ ಕಾರ್ಯಕ್ರಮದ ಒಟ್ಟು ಅಂದಾಜು ವೆಚ್ಚ ರೂ.260.00 ಕೋಟಿ ಇದ್ದು, ಇದರ ಪೈಕಿ ರಾಜ್ಯದ ಪಾಲು ರೂ.26.00 ಕೋಟಿ ಸಮುದಾಯ ವಂತಿಗೆ ರೂ.26.00 ಕೋಟಿ ಮತ್ತು ಸಾಲಧನ ರೂ.208.00 ಕೋಟಿ ಇರುತ್ತದೆ.